## ಡಾ.ಹಾ.ಮಾ.ನಾಯಕ

'ರಾಶಿ' ಅವರ ನಂತರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ೧೯೮೦ರಲ್ಲಿ ನೇಮಕಗೊಂಡವರು ಡಾ. ಹಾ.ಮಾ.ನಾಯಕ. ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತವಾಗಿದ್ದವರು ಹಾಮಾನಾ. 'ಪ್ರಜಾವಾಣಿ' ದಿನಪತ್ರಿಕೆ ಮತ್ತು ವಿವಿಧ ನಿಯತಕಾಲಿಕೆಗಳಲ್ಲಿನ ಅಂಕಣ ಬರಹಗಳ ಮೂಲಕವೂ ಅವರು ಹೆಸರಾಗಿದ್ದರು. ಅಂಕಣ ಬರಹಗಳಿಗಾಗಿಯೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗುವ ಮೂಲಕ ಈ ಪ್ರಕಾರಕ್ಕೆ ವಿಶಿಷ್ಟ ಘನತೆ–ಗೌರವಗಳನ್ನು ತಂದಿತ್ತರು.

ಇಂತಹ ಹಿನ್ನೆಲೆಯ ಹಾ.ಮಾ.ನಾಯಕರನ್ನು ಸರ್ಕಾರ ೧೯೮೦ರಲ್ಲಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿತು. ನಾಲ್ಕು ವರ್ಷಗಳ ಅಧ್ಯಕ್ಷ ಅವಧಿಯಲ್ಲಿ ಹಾ.ಮಾ.ನಾ. ಹಲವಾರು ಪ್ರಗತಿಪರ ಯೋಜನೆಗಳನ್ನು ಕೈಗೊಂಡರು. ಆಲೂರು ವೆಂಕಟರಾಯರ ಶತಮಾನೋತ್ಸವದ ಅಂಗವಾಗಿ ಅಕಾಡೆಮಿ ವತಿಯಿಂದ ಪ್ರಕಟಗೊಂಡ 'ಕರ್ನಾಟಕ ಗತವೈಭವ' ಅತ್ಯಂತ ಉಪಯುಕ್ತ ಕೃತಿ. ೧೬ ಸಾಹಿತ್ಯದ ಪ್ರಕಾರಗಳನ್ನು ಗುರುತಿಸಿ ಅವುಗಳಿಗೆ ಬಹುಮಾನಗಳನ್ನು ನೀಡುವುದು, ಸೃಜನಶೀಲ, ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ಅತ್ಯುತ್ತಮ ಎಂದು ವಿದ್ವಾಂಸರಿಂದ ಪರಿಗಣಿಸಲಾದ ಎರಡು ಕೃತಿಗಳಿಗೆ ಬಹುಮಾನ ನೀಡುವುದು, ಕಮ್ಮಟ, ಸಂಕಿರಣ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಂಘ–ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವುದು ಇತ್ಯಾದಿ ಕೆಲಸಗಳನ್ನು ಅಕಾಡೆಮಿ ಯಶಸ್ವಿಯಾಗಿ ನಿಭಾಯಿಸಿತು. ಮದರಾಸು, ಗೋವಾ ಮತ್ತು ಕರ್ನೂಲು ಈ ಪ್ರದೇಶಗಳಲ್ಲಿನ ಕನ್ನಡ ಸಂಘಗಳಿಗೆ ಪುಸ್ತಕಗಳನ್ನು ಒದಗಿಸಿದರು. ಪ್ರಸಿದ್ಧ ನಿಯತಕಾಲಿಕೆಗಳು ಹಾಗೂ ಪತ್ರಿಕೆಗಳಲ್ಲಿ ಪ್ರಕಟಗೊಂಡ ಸಣ್ಣ ಕಥೆ, ವಿಮರ್ಶೆ, ಲೇಖನ, ಕವನಗಳನ್ನು ಆಯ್ಕೆಮಾಡಿ ಪ್ರತ್ಯೇಕ ಸಂಪುಟದ ರೂಪದಲ್ಲಿ ಪ್ರಕಟಿಸಿದಲ್ಲದೆ, ಡಾ. ವಿ.ಕೆ.ಗೋಕಾಕ ಅವರ ಮಾರ್ಗದರ್ಶನದಲ್ಲಿ ಉದಯೋನ್ಮುಖ ಬರಹಗಾರರಿಗಾಗಿ ಸಾಹಿತ್ಯ ವಿಮರ್ಶೆ ಶಿಬಿರಗಳು, ತರಬೇತಿ ಕಮ್ಮಟಗಳು, ಸಾಹಿತ್ಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿದರು. ವಿನಿಮಯ ಯೋಜನೆಯಡಿ ಇವರು ಏರ್ಪಡಿಸಿದ್ದ ಇತರ ಭಾಷಾ ಸಾಹಿತಿಗಳ ಉಪನ್ಯಾಸಗಳು, ಇತರ ಭಾಷೆಗಳ ಸಾಹಿತ್ಯ ಸ್ವರೂಪವನ್ನು ತಿಳಿಯಲು ಅಕಾಡೆಮಿ ಕೈಗೊಂಡ ಪ್ರಮುಖ ಯೋಜನೆಯಾಗಿತ್ತು.